1) ಕೊಪ್ಪಳ 177.38 ಎಕರೆಗಳು

2) ಗಂಗಾವತಿ 137.39 ಎಕರೆಗಳು

3) ಸಿಂಧನೂರು 209.13 ಎಕರೆಗಳು

4) ರಾಯಚೂರು 63.15 ಎಕರೆಗಳು

ಈ) ಯರವಾರಿಸ್, ರಾಯಚೂರಿನಲ್ಲಿ ವಿಮಾನ ನಿಲ್ದಾಣ ಸ್ಥಾಪಿಸಲು ಕಾರ್ಯ ಸಾಧ್ಯ ಅಧ್ಯಯನವನ್ನು ಕೈಗೊಳ್ಳುವ ಕ್ರಮವನ್ನು ಕೆ.ಎಸ್.ಐ.ಐ.ಡಿ.ಸಿ ಸಂಸ್ಥೆಗೆ ವಹಿಸಲಾಗಿದೆ. ಅಧ್ಯಯನ ವರದಿ ಬಂದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

357 (455) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) :– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧನೂರು ಪಟ್ಟಣದ ಸಾರಿಗೆ ಬಸ್‌ಸ್ಟಾಂಡ್‌ನ್ನು ಹೊಸದಾಗಿ ನಿರ್ಮಾಣ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಆ) ಈ ಹೊಸ ಬಸ್‌ಸ್ಟ್ಯಾಂಡ್‌ನ್ನು ಮಾಡಲು ತಗಲುವ ಅಂದಾಜು ಮೊತ್ತವೆಷ್ಟು;

ಇ) ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು;

ಈ) ಗುಲ್ಬರ್ಗಾ ವಿಭಾಗದ ಎನ್.ಇ. ಕೆ.ಎಸ್.ಆರ್.ಟಿ.ಸಿ. ವ್ಯಾಪ್ತಿಯಲ್ಲಿ ಬರುವ 39 ತಾಲ್ಲೂಕುಗಳಲ್ಲಿ ಈ ವರ್ಷ ಎಷ್ಟು ಹೊಸ ಬಸ್‌ಸ್ಟ್ಯಾಂಡ್ ನಿರ್ಮಾಣ ಮಾಡುವ ಉದ್ದೇಶ ಸರ್ಕಾರಕ್ಕಿದೆ?

ಶ್ರೀ ಎನ್. ಚೆಲುವರಾಯಸ್ವಾಮಿ (ಸಾರಿಗೆ ಸಚಿವರು) :

ಅ) ಇದೆ.

ಆ) ರೂ. 250.00 ಲಕ್ಷಗಳು.

ಇ) ಮಾನ್ಯ ಸಂಸದರು/ಶಾಸಕರು/ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯವರಿಂದ ಅನುದಾನ ಪಡೆಯುವ ಪ್ರಕ್ರಿಯೆ ಜಾರಿಯಲ್ಲಿದೆ. ಈ ಮೊತ್ತ ಕ್ರೂಢೀಕರಣವಾದ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಈ) ಗುಲಬರ್ಗಾ ವಿಭಾಗದಲ್ಲಿ 7 ಹೊಸ ಬಸ್ ನಿಲ್ದಾಣ ನಿರ್ಮಿಸಲು ಉದ್ದೇಶಿಸಲಾಗಿದೆ.